# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

1951 ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ

**Karnataka State Financial Corporation**

Established under the State Financial Corporations' Act, 1951


ಸಂ.ಕರಾಹಸ/ಪ್ರಕ/ನಿಮುಪ್ರನಿ/ /2023-24 /C-2207 ದಿನಾಂಕ: 27-10-2023

## ಸುತ್ತೋಲೆ ಸಂ. 1035

ವಿಷಯ : ಮಹಿಳಾ ಉದ್ಯಮಿಗಳಿಗೆ ಅನುಷ್ಠಾನ ಮಾಡುತ್ತಿರುವ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಸಾಲದ ಗರಿಷ್ಟ ಮಿತಿಯನ್ನು 2.00 ಕೋಟಿ ರೂ.ಗಳಿಂದ 5.00 ಕೋಟಿ ರೂ.ಗಳಿಗೆ ಹೆಚ್ಚಿಸಿರುವ ಬಗ್ಗೆ.

ಉಲ್ಲೇಖ: 1) ಸುತ್ತೋಲೆ ಸಂ.1018, ದಿನಾಂಕ : 20.01.2022.
2) ಸರ್ಕಾರದ ಆದೇಶ ಸಂಖ್ಯೆ:ಮಮಇ57:ಮಅನಿ:2021, ಬೆಂಗಳೂರು, ದಿನಾಂಕ:13.01.2022
3) ಸರ್ಕಾರದ ಆದೇಶ ಸಂಖ್ಯೆ:ಮಮಇ 60 ಮಅನಿ 2023, ಬೆಂಗಳೂರು, ದಿನಾಂಕ: 07.10.2023

- - - - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ಉದ್ದಿಮೆದಾರರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಸಾಲದ ಈಗಿರುವ 2.00 ಕೋಟಿ ರೂ.ಗಳ ಮಿತಿಯನ್ನು ಗರಿಷ್ಟ 5.00 ಕೋಟಿ ರೂ.ಗಳವರೆಗೆ ಕೆಲವೊಂದು ಷರತ್ತುಗಳಿಗೊಳಪಟ್ಟು ಸರ್ಕಾರಿ ಆದೇಶ ಸಂಖ್ಯೆ:ಮಮಇ 60 ಮಅನಿ 2023, ಬೆಂಗಳೂರು, ದಿನಾಂಕ : 07.10.2023ರ ಅನ್ವಯ ಹೆಚ್ಚಿಸಲಾಗಿದೆ. ಸದರಿ ಸರ್ಕಾರಿ ಆದೇಶದ ಪ್ರತಿಯನ್ನು ಈ ಸುತ್ತೋಲೆಗೆ ಲಗತ್ತಿಸಲಾಗಿದೆ. ಸದರಿ ಸರ್ಕಾರಿ ಆದೇಶದಲ್ಲಿರುವ ಷರತ್ತುಗಳನ್ನು ಚಾಚೂ ತಪ್ಪದೆ ಪಾಲಿಸಲು ತಿಳಿಸಲಾಗಿದೆ. ಈ ವಿಷಯವನ್ನು ಕಛೇರಿಯ ಎಲ್ಲರ ಗಮನಕ್ಕೆ ತರುವುದು.

ಸುತ್ತೋಲೆ ಸಂ.1018ರಲ್ಲಿರುವ ಇನ್ನುಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು

ಅಡಕ : ಮೇಲಿನಂತೆ.

ಎಲ್ಲಾ ಶಾಖಾ ವ್ಯವಸ್ಥಾಪಕರುಗಳಿಗೆ;
ಎಲ್ಲಾ ಆ.ಲೆ.ಪ. ವಿಭಾಗಗಳಿಗೆ;
ಪ್ರಧಾನ ಕಛೇರಿಯ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ;
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ;
ಗ್ರಂಥಾಲಯ / ಸೂಚನಾ ಫಲಕ;
ವ್ಯ.ನಿ.ರವರ ಕಛೇರಿ

ಕ.ರಾ.ಹ.ಸಂ
ಪ್ರ.ನಿ.ರ ಕಛೇರಿ
ಸಂಖ್ಯೆ : 602 ದಿ: 20/10/2023

WCDSEC-WDC/60/2023-WCD_SEC_E-WOMEN AND CHILD WELFARE SEC

Please circulate to all concerned
20.10.23

438
20/10/23

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 2023-24ನೇ ಸಾಲಿನ ಜುಲೈ ಮಾಹೆಯ ಆಯವ್ಯಯ ಭಾಷಣದ ಕಂಡಿಕೆ:132 ರಲ್ಲಿನ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1) 2023-24ನೇ ಸಾಲಿನ ದಿನಾಂಕ:07.07.2023 ರಂದು ಮಂಡಣೆಯಾದ ಆಯವ್ಯಯ ಘೋಷಣೆ ಕಂಡಿಕೆ: 132
2) ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ.ನಿಗಮ ಇವರ ದಿನಾಂಕ:17.08.2023ರ ಪತ್ರ ಸಂಖ್ಯೆ: ಮಅನಿ / KSFC /ಬಸಯೋ/ 2023-24/129
3) ಸರ್ಕಾರದ ಆದೇಶ ಸಂಖ್ಯೆ:ಮಮಇ 64 ಮಅನಿ 2014, ದಿನಾಂಕ:10.12.2015
4) ಸರ್ಕಾರದ ಆದೇಶ ಸಂಖ್ಯೆ:ಮಮಇ 57 ಮಅನಿ 2021, ದಿನಾಂಕ:13.01.2022
5) 2023-24ನೇ ಸಾಲಿನ ಪರಿಷ್ಕೃತ ಆಯವ್ಯಯಕ್ಕೆ ಸಂಬಂಧಿಸಿದಂತೆ Budget Advice, ದಿನಾಂಕ:05.08.2023

JD(FA)

********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಆಯವ್ಯಯ ಘೋಷಣೆ ಕಂಡಿಕೆ:132ರಲ್ಲಿ ಮಹಿಳಾ ಉದ್ಯಮಿಗಳು, ಆತಿಥ್ಯ, ಆರೈಕೆ ಮತ್ತು ಪ್ರವಾಸೋದ್ಯಮದಂತಹ ಸೇವಾ ವಲಯದಲ್ಲಿ ಹೆಚ್ಚಿನ ಅವಕಾಶ ಪಡೆಯುತ್ತಿದ್ದಾರೆ. ಆದ್ದರಿಂದ ಸೇವಾ ವಲಯದಲ್ಲಿ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಶೇ.4 ರ ಬಡ್ಡಿ ದರದಲ್ಲಿ ನೀಡಲಾಗುವ ಸಾಲದ ಮಿತಿಯನ್ನು ಎರಡು ಕೋಟಿ ರೂ.ಗಳಿಂದ ಐದು ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರದಲ್ಲಿ, 2016-17ನೇ ಸಾಲಿನಿಂದ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮುಖಾಂತರ ಮೇಲೆ ಓದಲಾದ ಕ್ರಮಸಂಖ್ಯೆ (3) ದಿನಾಂಕ:10.12.2015ರ ಆದೇಶದನ್ವಯ, ಮಹಿಳಾ ಉದ್ಯಮಿಗಳಿಗೆ **"ಬಡ್ಡಿ ಸಹಾಯಧನ ಯೋಜನೆ"**ಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಕನಿಷ್ಠ ರೂ.5.00 ಲಕ್ಷಗಳಿಂದ ಗರಿಷ್ಠ ರೂ.50.00 ಲಕ್ಷಗಳವರೆಗೆ ಸಾಲ ಸೌಲಭ್ಯ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮಂಜೂರು ಮಾಡುವ ಸಾಲದ ಮೇಲೆ ವಿಧಿಸುವ ಬಡ್ಡಿಯಲ್ಲಿ ಶೇಕಡ 10 ರಷ್ಟು ಬಡ್ಡಿಯನ್ನು ಸಹಾಯಧನವಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಒದಗಿಸಲಾಗುತ್ತಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ (4)ರ ಆದೇಶದಲ್ಲಿ 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ:26ರಲ್ಲಿ ಘೋಷಿಸಲಾದಂತೆ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮುಖಾಂತರ ಕನಿಷ್ಠ ರೂ.5.00 ಲಕ್ಷಗಳಿಂದ ಗರಿಷ್ಠ ರೂ.2.00 ಕೋಟಿಗಳವರೆಗೆ ಸಾಲ ಸೌಲಭ್ಯ ಮತ್ತು ಶೇಕಡ 10ರಷ್ಟು ದರದಲ್ಲಿ ಬಡ್ಡಿ ಸಹಾಯಧನವನ್ನು ಒದಗಿಸಲು ಅವಕಾಶ ನೀಡಿದ್ದು, ಅದರಂತೆ, ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆದ್ದರಿಂದ, **2023-24ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆ ಕಂಡಿಕೆ ಸಂಖ್ಯೆ:132ರಲ್ಲಿ** "ಮಹಿಳಾ ಉದ್ಯಮಿಗಳು, ಆತಿಥ್ಯ ಆರೈಕೆ ಮತ್ತು ಪ್ರವಾಸೋದ್ಯಮದಂತಹ ಸೇವಾ ವಲಯದಲ್ಲಿ ಹೆಚ್ಚಿನ ಅವಕಾಶ ಪಡೆಯುತ್ತಿರುವುದರಿಂದ, ಸೇವಾ ವಲಯದಲ್ಲಿ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಶೇ.4ರ ಬಡ್ಡಿ ದರದಲ್ಲಿ ನೀಡಲಾಗುವ ಸಾಲದ ಮಿತಿಯನ್ನು ರೂ.2.00 ಕೋಟಿಗಳಿಂದ ರೂ.5.00 ಕೋಟಿಗಳಿಗೆ ಹೆಚ್ಚಿಸಲಾಗುವುದು ಎಂದು ಘೋಷಣೆ ಮಾಡಲಾಗಿದ್ದು ಅದರಂತೆ, 2023-24ನೇ ಸಾಲಿನ ಆಯವ್ಯಯ ಅಂದಾಜು ಸಂಪುಟ-5ರಲ್ಲಿ ಸದರಿ ಯೋಜನೆಯ ಲೆಕ್ಕ ಶೀರ್ಷಿಕೆ:2232-02-001-0-10-106ರಲ್ಲಿ ರೂ.5200.00ಗಳ ಅನುದಾನ ನಿಗದಿಪಡಿಸಲಾಗಿರುವುದರಿಂದ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸಬೇಕೆಂದು ವ್ಯವಸ್ಥಾಪಕ ನಿರ್ದೇಶಕರು ಕ.ರಾ.ಮ.ಅ.ನಿಗಮ ಇವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (5)ರ ದಿನಾಂಕ:05.08.2023ರ Budget Advice ರಲ್ಲಿ ಆಯವ್ಯಯ ಭಾಷಣ ಕಂಡಿಕೆ:132 ರ ಘೋಷಣೆಗೆ ಸಂಬಂಧಿಸಿದಂತೆ, ಲೆಕ್ಕ ಶೀರ್ಷಿಕೆ:2235-02-001-0-10-106 (ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯಧನ)ರಡಿ ರೂ.5200.00 ಲಕ್ಷಗಳನ್ನು ಒದಗಿಸಲಾಗಿದ್ದು, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯೊಳಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಮಮಇ 60 ಮಅನಿ 2023, ಬೆಂಗಳೂರು, ದಿನಾಂಕ:07.10.2023</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2023-24ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:132ಕ್ಕೆ ಸಂಬಂಧಿಸಿದಂತೆ, "ಮಹಿಳಾ ಉದ್ಯಮಿಗಳು, ಆತಿಥ್ಯ ಆರೈಕೆ ಮತ್ತು ಪ್ರವಾಸೋದ್ಯಮದಂತಹ ಸೇವಾ ವಲಯದಲ್ಲಿ ಹೆಚ್ಚಿನ ಅವಕಾಶ ಪಡೆಯುತ್ತಿರುವುದರಿಂದ ಸೇವಾ ವಲಯದಲ್ಲಿ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಶೇ.4ರ ಬಡ್ಡಿ ದರದಲ್ಲಿ ನೀಡಲಾಗುವ ಸಾಲದ ಮಿತಿಯನ್ನು ರೂ.2.00 ಕೋಟಿಗಳಿಂದ ರೂ.5.00 ಕೋಟಿಗಳಿಗೆ ಹೆಚ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ಮತ್ತು ಸರ್ಕಾರದ ಆದೇಶ ಸಂಖ್ಯೆ:ಮಮಇ 57 ಮಅನಿ 2021, ದಿನಾಂಕ:13.01.2022ರ ಆದೇಶದ ಅನುಬಂಧದಲ್ಲಿನ ಮಾರ್ಗಸೂಚಿಗಳನುಸಾರ 2023-24ನೇ ಆರ್ಥಿಕ ಸಾಲಿನಿಂದ ಹೊಸದಾಗಿ ಆಯ್ಕೆಯಾಗುವ ಅರ್ಹ ಫಲಾನುಭವಿಗಳಿಗೆ ಅನ್ವಯವಾಗುವಂತೆ ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸುವ ಷರತ್ತಿನೊಂದಿಗೆ ಕ್ರಮವಹಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

**WCDSEC-WDC/60/2023-WCD_SEC_E-WOMEN AND CHILD WELFARE SEC**

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 295 ವೆಚ್ಚ-10/2023, ದಿನಾಂಕ:29.08.2023ರನ್ವಯ ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ:ಪಿಡಿಎಸ್ 71 ಐಎಂಎಂ 2023, ದಿನಾಂಕ:27.09.2023ರಲ್ಲಿ ನೀಡಿರುವ ಸಹಮತಿ ಮತ್ತು ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

R Latha 7/10/23

(ಆರ್.ಲತಾ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
2. ಮಹಾಲೇಖಪಾಲರು, (ಇ & ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
3. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
4. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಬೆಂಗಳೂರು-11.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನಸೌಧ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ ಬೆಂಗಳೂರು.
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
12. ಶಾಖಾಧಿಕಾರಿ, ಸ್ತ್ರೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಒಡಿಜಿಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.

******

14. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಕೆ.ಎಸ್.ಎಫ್.ಸಿ, ಭವನ, ನಂ:1/1, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು-560 052 (ಮುಂದಿನ ಸೂಕ್ತ ಕ್ರಮಕ್ಕಾಗಿ)

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./ 193/Secy/2021-22/ ದಿನಾಂಕ : 20/01/2022

CIRCULAR NO-1018

Sub:- **Interest Subvention / Subsidy Scheme for New & Existing Micro and Small enterprises in Service Sector promoted by Women Entrepreneurs (2021).**

Ref:- ಸರ್ಕಾರಿ ಆದೇಶ ಸಂಖ್ಯೆ:ಮಮಇ57ಮಆನಿ:2021, ಬೆಂಗಳೂರು ದಿನಾಂಕ:13-01-2022.

=====

Considering the difficulties faced by Micro and Small enterprises in the service sector in availing institutional credit towards capital investments at reasonable interest rates, especially ventures promoted by Women Entrepreneurs, Government of Karnataka has introduced an **Interest Subvention / Subsidy Scheme for New & Existing Micro and Small enterprises in Service Sector promoted by Women Entrepreneurs (2021)** in the State to be implemented through Karnataka State Financial Corporation (KSFC).

The details of this scheme are as in Government Order dated 13-01-2022 referred above, a copy of the same along with detailed guidelines are enclosed herewith for ready reference.

<u>The Scheme will be implemented in KSFC with effect from 20/01/2022</u>

The salient features, eligibility criteria, guidelines etc., of the scheme are as below:

I. Salient features:

*(i) The scheme is extended to new and existing Micro and Small Enterprises in Service Sector.*

(ii) *The definition of Micro and Small Enterprises: Enterprises engaged in providing or rendering services will be as per the provisions of the "Micro, Small and Medium Enterprises Development Act, 2006 (27 of 2006)", prevailing Notification (S.O. 1702(E)) dtd. 01/06/2020 of Ministry of Micro, Small and Medium Enterprises or modifications from time to time.*

(iii) *The scheme is extended for all new investments in building, plant and machinery / equipments by **new enterprises in service sector** and by way of expansion, diversification, modernization and technology up-gradation etc., by **existing enterprises in service sector.***

*The investment in Plant and Machineries / Equipment will be reckoned as in the prevailing notification (S.O. 2119 (E)) dtd.26/06/2020 of Ministry of Micro, Small and Medium Enterprises or modifications from time to time.*

(iv) *Investments made towards purchase of land either own/leased land or land allotted by Government agencies like KIADB / KSSIDC etc., are **not eligible for financing** under the scheme.*

(v) *The interest subvention / subsidy would be available for a period of 5 years from the date of first disbursement of loan/s by KSFC.*

## II. Eligibility Criteria:

(i) *Eligible Enterprises:*

i. Enterprises promoted by Women Entrepreneurs i.e proprietary concerns, partnership firms, companies & other legal entities.

ii. SC/ST Women Entrepreneurs, who have already availed loan/s under special scheme available for them are not eligible to avail loan/s under this scheme.

iii. Women Entrepreneurs engaged in service sector activities, who have already availed loan/s under earlier Women Entrepreneur interest subvention / subsidy scheme, are also eligible to avail loan/s under this scheme.

iv. Service activities identified and updated from time to time by KSFC <u>will only be eligible</u> to cover under the special Scheme.

A Committee of General Managers headed by the senior most General Manager will identify, suggest / recommend the eligible service activities *(with product code)* and also co-ordinate, clarify queries raised by the Branches.

*(ii) Quantum of Loan/s:*

i. The maximum Term Loan/s will be Rs.200.00 lakh for each legal entity.

ii. Enterprises can avail multiple loan/s under the scheme subject to overall ceiling of Rs 200 lakh as above for each legal entity *(including loan/s availed in the earlier Women Entrepreneur Scheme by the same entity).*

iii. If the loan exceeds the overall ceiling of Rs. 200.00 lakh as above for each entity, the loan/s over and above the limits will carry contract rate of interest of KSFC.

iv. The minimum term loan size is Rs.5.00 lakh.

*:) Applicable Interest:*

i. KSFC shall evaluate loan/s with prevailing contract rate of interest and the promoters shall pay the interest accordingly.

ii. The loan/s availed under this scheme will also be eligible for a rebate of 0.50% for prompt payment.

iii. With the prevailing contract rate of interest in KSFC at 12.00% p.a, allowing a rebate of 0.50% for prompt payment; the beneficiary / borrower will be eligible to avail the interest subvention (upfront) of 7.50% p.a.

iv. With a ceiling of effective rate of interest payable by the Women Entrepreneur under the scheme at **4.00% p.a only;** the interest subvention rate will increase / decrease with change in contract rate of interest charged by KSFC from time to time.

v. To avail loan under the scheme; the enterprise shall be regular in repayment of all the loan/s availed.

vi. The Enterprises can avail loan/s at effective rate of **4.00% p.a** till the overall limit of Rs. 200 lakh; there after the loan/s will carry prevailing contract rate of interest in KSFC.

vii. Investments made on land allotted by Government agencies like KIADB / KSSIDC etc., are **not covered in the Interest Subvention / Subsidy Scheme for New & Existing Enterprises in Service Sector promoted by Women Entrepreneurs (2021);** However, if the enterprise desires to avail financial assistance for land allotted by Government agencies like KIADB / KSSIDC etc., such component of loans with prevailing contract rate of interest can be availed under General Scheme.

viii. The service enterprises will be eligible <u>for interest subvention benefits for a maximum period of five years from the date of first disbursement</u> of respective loan/s. If the repayment period exceeds beyond five years for any reason including restructuring, the unpaid loan / loan balance will carry contract rate of interest charged by KSFC for the respective loan.

ix. The interest subvention under the scheme is eligible only for the Term loan/s sanctioned to the service enterprises mentioned above and not applicable to other types of loan/s availed by the service enterprise from KSFC such as Working Capital Term Loan, Privileged Entrepreneurs Loan, Corporate Loan etc.,

## III. Ineligible Activities:

i. Refinancing /takeover of loan/s from other Bank/s, NBFCs/ NSIC / private financiers and Financial Institutions or for conversion of earlier loan/s availed from KSFC.

ii. Enterprises engaged in the following activities:

*(i) All infrastructure projects, Housing, Commercial buildings / Commercial Real Estate (CRE), etc.,*
*(ii) Business / Trading Activities.*
*(iii) Malls, Cinema Houses etc.,*
*(iv) Transports Vehicles, Construction equipments etc.,*
*(v) Any other activity other than the Service activities identified by KSFC which are not specifically mentioned herein.*

## IV. Other General terms and condition:

i. Vehicles of any type shall not be considered as part of the project.

ii. The terms and conditions of loan sanction such as promoter's contribution, DER, Security requirement, viability of the project etc., shall be ensured as per the prevailing lending policy.

iii. The overall exposure under the **Interest Subvention / Subsidy Scheme for New & Existing Enterprises in Service Sector promoted by Women Entrepreneurs (2021)** shall be within the Government of Karnataka's budgetary allocation in the respective Financial Year.

## V. Clarifications:

Any clarification on the Scheme may be obtained from Principal Secretary / Secretary, Department of Women and Child Development and Empowerment of Differently Abled & Senior Citizens.

**Branch Managers are advised to exercise due diligence while selecting the Women Entrepreneurs and take utmost care while appraising the project.**

All the concerned are hereby instructed to go through the Government Order referred above and follow the guidelines given therein strictly while considering the loan proposals under this scheme. The contents of this circular shall be brought to the notice of all the concerned in their office.

MANAGING DIRECTOR

Encl: As above.

To:

*All the BMs/AGMs & DGMs of Branches & IA Cells,*
*All Section Heads in HO,*
*All the General Managers,*
*The Executive Directors,*
*PA to MD, Library & Notice Board*

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:26ರಲ್ಲಿನ ಯೋಜನೆಗೆ ಸಂಬಂಧಿಸಿದಂತೆ ಅನುಷ್ಠಾನ ಹಾಗೂ ಮಾರ್ಗಸೂಚಿಯನ್ವಯ ಕ್ರಮವಹಿಸುವ ಕುರಿತು.

ಓದಲಾಗಿದೆ:
1) ದಿನಾಂಕ:30.06.2021ರ ಸರ್ಕಾರದ ಆದೇಶ ಸಂಖ್ಯೆ: ಮಮಇ 54 ಮಅನಿ 2021
2) ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ.ನಿಗಮ ಇವರ ದಿನಾಂಕ:16.07.2021ರ ಪತ್ರ ಸಂಖ್ಯೆ:ಮಅನಿ/ಬಡ್ಡಿ.ಸ.01/2021-22/56
3) ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ.ನಿಗಮ ಇವರ ದಿ:07.09.2021ರ ಪತ್ರಸಂಖ್ಯೆ:ಮಅನಿ/ಕೆ.ಎಸ್.ಎಫ್.ಸಿ/ಹೊ.ಯೋ/2021-22/134-A

********

## ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖಿತ (1)ರ ದಿನಾಂಕ:30.06.2021ರ ಆದೇಶದಲ್ಲಿ ಮಾನ್ಯ ಮುಖ್ಯ ಮಂತ್ರಿಯವರ 2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ/ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಎರಡು ಕೋಟಿ ರೂಗಳವರೆಗೆ ಶೇ.4ರ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುವುದಕ್ಕೆ ಸಂಬಂಧಿಸಿದಂತೆ, ಲೆಕ್ಕ ಶೀರ್ಷಿಕೆ :2235-02-001-0-10ರಡಿ ರೂ.5800.00 ಲಕ್ಷಗಳನ್ನು ಒದಗಿಸಲಾಗಿದ್ದು, ಈ ಮೊತ್ತದ ಪೈಕಿ ರೂ.5000.00 ಲಕ್ಷಗಳನ್ನು ಮುಂದುವರೆದ ಯೋಜನೆಗೆ ವಿನಿಯೋಗಿಸುವುದು ಹಾಗೂ ರೂ.800.00 ಲಕ್ಷಗಳನ್ನು ಹೊಸ ಯೋಜನೆಯಾದ ಮಹಿಳಾ ಉದ್ಯಮಿಗಳಿಗೆ ರೂ.2.00 ಕೋಟಿಗಳವರೆಗೆ ಶೇ.4ರ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸಲು ವಿನಿಯೋಗಿಸುವುದೆಂದು ಆದೇಶಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖಿತ (2)ರ ದಿನಾಂಕ:16.07.2021ರ ಪತ್ರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ 2021-22ನೇ ಸಾಲಿನ ಆಯವ್ಯಯ ಭಾಷಣದ ಪ್ಯಾರ ಸಂಖ್ಯೆ:26 ಹಾಗೂ ದಿನಾಂಕ:30.06.2021ರ ಆದೇಶಕ್ಕೆ ಸಂಬಂಧಿಸಿದಂತೆ, ನಿಗಮದಿಂದ ಈಗಾಗಲೇ ಕೆ.ಎಸ್.ಎಫ್.ಸಿ. ಮೂಲಕ ಅನುಷ್ಠಾನಗೊಳಿಸುತ್ತಿರುವ ಬಡ್ಡಿ ಸಹಾಯಧನ ಯೋಜನೆಯ ರೀತಿಯಲ್ಲಿಯೇ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ/ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ 2.00 ಕೋಟಿ ರೂಪಾಯಿಗಳ ವರೆಗೆ ಶೇ.4ರ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುವುದು ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆ? ಅಥವಾ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ನೇರವಾಗಿ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ

ಪಲ್ಲವಿ
15/03/2022

ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ/ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ 2.00 ಕೋಟಿ ರೂಪಾಯಿಗಳವರೆಗೆ ಶೇಕಡ 4ರ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ಪ್ರತ್ಯೇಕವಾಗಿ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆ? ಎಂಬುದು ಸ್ಪಷ್ಟವಾಗಿರುವುದಿಲ್ಲವೆಂದು ತಿಳಿಸುತ್ತಾ, ಈ ಹೊಸ ಯೋಜನೆಯು ಬಡ್ಡಿ ಸಹಾಯಧನ ಯೋಜನೆಯೇ? ಅಥವಾ ಸಾಲದ ಯೋಜನೆಯೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ವ್ಯ.ನಿ, ಕ.ರಾ.ಮ.ಅ.ನಿಗಮ ಇವರು ಕೋರಿರುತ್ತಾರೆ.

ಮೇಲೆ ಓದಲಾದ ಉಲ್ಲೇಖಿತ (3)ರ ದಿನಾಂಕ:07.09.2021ರ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ.ನಿಗಮ ಇವರ ಪತ್ರದಲ್ಲಿ 2021-22ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ: 26ರಲ್ಲಿ ಮಹಿಳಾ ಉದ್ಯಿಮೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಉದ್ಯಿಮೆಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ/ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ರೂ.2.00 ಕೋಟಿಗಳವರೆಗೆ ಶೇ.4ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸುವುದು ಎಂದು ಘೋಷಿಸಲಾಗಿದ್ದು, ಈ ಯೋಜನೆಯನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ/ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ರಚಿಸಿರುವ ಮಾರ್ಗಸೂಚಿಯನ್ನು ಅನುಮೋದಿಸಬೇಕೆಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಮಮಇ 57 ಮಅನಿ 2021, ಬೆಂಗಳೂರು, ದಿನಾಂಕ:13.01.2022</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:26ಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಈಗಾಗಲೇ ಅನುಷ್ಠಾನಗೊಳಿಸುತ್ತಿರುವ KSFC ಮೂಲಕ ಬಡ್ಡಿ ಸಹಾಯಧನ ಯೋಜನೆ ರೀತಿಯಲ್ಲಿಯೇ 2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ "ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ / ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ 2.00 ಕೋಟಿ ರೂಪಾಯಿಗಳವರೆಗೆ 4% ರ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುವುದು" ಎಂದು ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಹಾಗೂ ಪ್ರಸ್ತುತ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ 12%ರ ಬಡ್ಡಿದರದ ಮೇಲೆ ಸಾಲ ಮಂಜೂರು ಮಾಡುತ್ತಿದ್ದು, ಇದಕ್ಕೆ 8% ರಷ್ಟು ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ನೀಡುವಂತೆ ಹಾಗೂ 2021-22ನೇ ಸಾಲಿನಲ್ಲಿ ಈ ಯೋಜನೆಗೆ ಒದಗಿಸಿರುವ ರೂ.5000.00 ಲಕ್ಷಗಳನ್ನು ಕಳೆದ ಸಾಲಿನಲ್ಲಿ ಪಡೆದ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆಗೆ ಮತ್ತು ರೂ.800.00 ಲಕ್ಷಗಳನ್ನು ಈ ಸಾಲಿನ ಆಯವ್ಯಯ ಘೋಷಣೆಯ ಅನುಷ್ಠಾನಕ್ಕೆ ವಿನಿಯೋಗಿಸಲು

13/01/2022

ಮತ್ತು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನ ಮಾರ್ಗಸೂಚಿಯನುಸಾರ ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸುವ ಷರತ್ತಿನೊಂದಿಗೆ ಕ್ರಮವಹಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಕ್ರಮವಾಗಿ ದಿನಾಂಕ:31.07.2021ರ ಅ.ಟಿ. ಸಂಖ್ಯೆ: ಆಇ 249 ವೆಚ್ಚ-10/2021ರನ್ವಯ ಮತ್ತು ದಿನಾಂಕ:11.01.2022ರ ಅ.ಟಿ.ಸಂಖ್ಯೆ: ಆಇ 249 ವೆಚ್ಚ-10/2021 ಹಾಗೂ ಯೋಜನಾ ಇಲಾಖೆಯ ದಿನಾಂಕ:01.09.2021ರಲ್ಲಿ ನೀಡಿರುವ ಸಹಮತಿ ಮತ್ತು ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್. ಕಲ್ಪನ)
ಸರ್ಕಾರದ ಅಪರ ಕಾರ್ಯದರ್ಶಿಗಳು
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
2. ಮಹಾಲೇಖಪಾಲರು, (ಇ & ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
3. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
4. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಬೆಂಗಳೂರು-11.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಕೆ.ಎಸ್.ಎಫ್.ಸಿ. ಭವನ, ನಂ:1/1, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು - 560 052
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನಸೌಧ, ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ ಬೆಂಗಳೂರು.
10. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು

13. ಶಾಖಾಧಿಕಾರಿ, ಸ್ವೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಶಾಖಾ ರಕ್ಷಾ ಕಡತ/ಒಡಿಜಿಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.

*****

13/04/2022

# ಅನುಬಂಧ

## ಸರ್ಕಾರಿ ಆದೇಶ ಸಂಖ್ಯೆ:ಮಮಇ 57 ಮಅನಿ 2021, ದಿನಾಂಕ:13.01.2022ಕ್ಕೆ ಮಾರ್ಗಸೂಚಿ:

**ರಾಜ್ಯದ ಮಹಿಳಾ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೇವಾ ಕ್ಷೇತ್ರದ ಉದ್ಯಮಗಳಿಗೆ ಬಡ್ಡಿ ಸಹಾಯಧನ ಯೋಜನೆ (2021).**

ರಾಜ್ಯದ ಮಹಿಳಾ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೇವಾ ಕ್ಷೇತ್ರದ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಸಮಂಜಸವಾದ ಬಡ್ಡಿದರದಲ್ಲಿ ಬಂಡವಾಳ ಹೂಡಿಕೆಗಳಿಗೆ ಸಾಂಸ್ಥಿಕ ಸಾಲವನ್ನು ಪಡೆಯುವಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು ಪರಿಗಣಿಸಿ, ಕರ್ನಾಟಕ ಸರ್ಕಾರವು ಮಹಿಳಾ ಉದ್ದಿಮೆದಾರರಿಗೆ ಪ್ರತ್ಯೇಕ ಬಡ್ಡಿ ಸಹಾಯಧನ (Interest Subvention/Subsidy) ಯೋಜನೆಯನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ(ಕೆ.ಎಸ್.ಎಫ್.ಸಿ) ಮೂಲಕ ಜಾರಿಗೊಳಿಸಿದೆ.

I. **ಮಹಿಳಾ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಸೇವಾ ಕ್ಷೇತ್ರದ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೇವಾ ಕ್ಷೇತ್ರದ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಸೂಕ್ಷ್ಮ ಹಾಗೂ ಸಣ್ಣ ಘಟಕಗಳಿಗೆ ಬಡ್ಡಿ ಸಹಾಯಧನ (Interest Subvention/Subsidy) ಯೋಜನೆ (2021)ರ ಪ್ರಮುಖ ಅಂಶಗಳು.**

i. ಈ ಯೋಜನೆಯನ್ನು ಸೇವಾ ಕ್ಷೇತ್ರದ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ವಿಸ್ತರಿಸುವುದು.

ii. ಸೇವಾ ವಲಯದ ಉದ್ಯಮಗಳ ವ್ಯಾಖ್ಯಾನ - ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ 2006ರ ನಿಬಂಧನೆಯಲ್ಲಿ, ದಿನಾಂಕ 1ನೇ ಜೂನ್ 2020ರ ಎಸ್ ಓ 1702(ಇ) ಅಧಿಸೂಚನೆ ಪ್ರಕಾರ ಚಾಲ್ತಿಯಲ್ಲಿರುವ ಹಾಗೂ ಕಾಲಕಾಲಕ್ಕೆ ಮಾಡಲಾದ ಮಾರ್ಪಾಡುಗಳ ಸೇವಾ ವಲಯದ ವ್ಯಾಖ್ಯಾನ.

iii. ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೇವಾ ಉದ್ಯಮಗಳ ವಿಸ್ತರಣೆ, ವೈವಿಧ್ಯೀಕರಣ, ಆಧುನೀಕರಣ, ತಂತ್ರಜ್ಞಾನದ ಉನ್ನತೀಕರಣ ಇತ್ಯಾದಿಗಳಿಗೆ ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳ ಒಟ್ಟು ಬ್ಲಾಕ್‌ನ ಎಲ್ಲಾ ಹೊಸ ಹೂಡಿಕೆಗಳಿಗೆ ಈ ಯೋಜನೆಯನ್ನು ವಿಸ್ತರಿಸುವುದು.

iv. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಯಿಂದ ಮಂಜೂರಾದ ಭೂಮಿಯಲ್ಲಿ ಮಾಡಿದ ಹೂಡಿಕೆ, ಸ್ವಂತ/ಗುತ್ತಿಗೆ ಪಡೆದ ಭೂಮಿಯನ್ನು ಖರೀದಿಸಲು ಮಾಡಿದ ಹೂಡಿಕೆಗಳು ಯೋಜನೆಯಡಿ ಹಣಕಾಸು ಪಡೆಯಲು ಅರ್ಹವಿರುವುದಿಲ್ಲ.

ಕಲ್ಪನಾ ಬಿ.ಬಿ
13/01/2022

v. ಕೆ.ಎಸ್.ಎಫ್.ಸಿ. ಸಾಲದ ಮೊದಲ ಕಂತಿನ ವಿತರಣೆಯ ದಿನಾಂಕದಿಂದ ಗರಿಷ್ಠ ಐದು ವರ್ಷಗಳವರೆಗೆ ಬಡ್ಡಿ ಸಹಾಯಧನ ಲಭ್ಯವಿರುತ್ತದೆ.

II. ಮಹಿಳಾ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಸೇವಾ ಕ್ಷೇತ್ರದ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೇವಾ ಕ್ಷೇತ್ರದ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಸೂಕ್ಷ್ಮ ಹಾಗೂ ಸಣ್ಣ ಘಟಕಗಳಿಗೆ ಬಡ್ಡಿ ಸಹಾಯಧನ (Interest Subvention/Subsidy) ಯೋಜನೆ (2021)ರಡಿಯಲ್ಲಿ ಸಾಲ ಪಡೆಯಲು ಅರ್ಹತೆ ಹಾಗೂ ಮಾರ್ಗಸೂಚಿಗಳು.

i. ಮಹಿಳಾ ಉದ್ಯಮಿಗಳಿಂದ ಸ್ಥಾಪಿಸಲ್ಪಟ್ಟ ಉದ್ಯಮಿಗಳು ಅಂದರೆ, ಮಾಲೀಕತ್ವ, ಪಾಲುದಾರಿಕೆ ಸಂಸ್ಥೆಗಳು, ಕಂಪನಿಗಳು ಹಾಗೂ ಇತರ ಕಾನೂನು ಅಸ್ತಿತ್ವದ ಉದ್ಯಮಿಗಳು.

ii. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಹಿಳಾ ಉದ್ಯಮಿಗಳಿಗೆ ಲಭ್ಯವಿರುವ ವಿಶೇಷ ಯೋಜನೆಯಡಿ ಈಗಾಗಲೇ ಸಾಲದ ನೆರವು ಪಡೆದಿರುವ ಮಹಿಳಾ ಉದ್ಯಮಿಗಳಿಗೆ ಈ ಯೋಜನೆಯಡಿ ಸಾಲದ ನೆರವು ಲಭ್ಯವಿರುವುದಿಲ್ಲ.

iii. ಈ ಹಿಂದೆ ಚಾಲ್ತಿಯಲ್ಲಿದ್ದ "ಮಹಿಳೆಯರಿಗಾಗಿ ಬಡ್ಡಿ ಸಹಾಯಧನ ಯೋಜನೆ"ಯಡಿಯಲ್ಲಿ ನೆರವು ಪಡೆದ ಸೇವಾ ವಲಯದ ಚಟುವಟಿಕೆಗಳಲ್ಲಿ ತೊಡಗಿರುವ ಮಹಿಳಾ ಉದ್ಯಮಿಗಳಿಗೆ ಈ ಯೋಜನೆಯಡಿಯಲ್ಲಿ ಸಾಲದ ನೆರವು ಲಭ್ಯವಿರುತ್ತದೆ.

iv. ಕೆ.ಎಸ್.ಎಫ್.ಸಿ. ಕಾಲಕಾಲಕ್ಕೆ ಗುರುತಿಸಿದ / ನವೀಕರಿಸಿದ ಸೇವಾ ವಲಯದ ಚಟುವಟಿಕೆಗಳಿಗೆ ಮಾತ್ರ ಈ ಯೋಜನೆಯಡಿಯಲ್ಲಿ ಸಾಲದ ನೆರವು ಪಡೆಯಲು ಅರ್ಹವಿರುತ್ತವೆ.

III. ಸಾಲದ ಪ್ರಮಾಣ:

v. ಸೂಕ್ಷ್ಮ, ಮತ್ತು ಸಣ್ಣ ಪ್ರಮಾಣದ ಸೇವಾ ಘಟಕಗಳು: ಸೇವಾ ಕ್ಷೇತ್ರದಲ್ಲಿ ನೇರವಾಗಿ ತೊಡಗಿಸಿಕೊಂಡಿರುವ ಕಾನೂನು ಅಸ್ತಿತ್ವದ ಪ್ರತ್ಯೇಕ ಉದ್ಯಮಗಳಿಗೆ ಕಟ್ಟಡ ಸ್ಥಾವರ ಮತ್ತು ಯಂತ್ರೋಪಕರಣಕ್ಕೆ ಗರಿಷ್ಠ ಸಾಲದ ಗರಿಷ್ಠ ಮಿತಿ 200.00 ಲಕ್ಷ ರೂ.ಗಳು.

i. ಉದ್ಯಮಗಳು ಈ ಯೋಜನೆಯಡಿಯಲ್ಲಿ ಅನೇಕ ಬಾರಿ ಸಾಲಗಳನ್ನು ಪಡೆಯಬಹುದು. ಆದರೆ, ಪ್ರತಿ ಘಟಕಕ್ಕೆ ಒಟ್ಟಾರೆ ಸಾಲದ ಗರಿಷ್ಠ ಮಿತಿ 200.00 ಲಕ್ಷ ರೂ.ಗಳು ಮಾತ್ರ ಲಭ್ಯವಿರುತ್ತದೆ.

ii. ಸಾಲದ ಮಿತಿ 200.00 ಲಕ್ಷ ರೂ ಮೀರಿದರೆ, ಹೆಚ್ಚುವರಿ ಭಾಗದ ಸಾಲಕ್ಕೆ ಕೆ.ಎಸ್.ಎಫ್.ಸಿ ಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿದರವು ಅನ್ವಯಿಸುತ್ತದೆ.

iii. ಸಾಲದ ಕನಿಷ್ಠ ಮಿತಿ 5.00 ಲಕ್ಷ ರೂಗಳಾಗಿರುತ್ತದೆ.

ಕಲ್ಪನಾ
13/01/2022

**IV. ಅನ್ವಯವಾಗುವ ಬಡ್ಡಿದರ:**

i. ಕೆ.ಎಸ್.ಎಫ್.ಸಿ.ಯು ಚಾಲ್ತಿಯಲ್ಲಿರುವ ಬಡ್ಡಿದರದಲ್ಲಿ ಸಾಲವನ್ನು ಮೌಲ್ಯಮಾಪನ ಮಾಡಿ ಸಾಲ ಮಂಜೂರು ಮಾಡುತ್ತದೆ. ಉದ್ದಿಮೆದಾರರು ಅದಕ್ಕೆ ಅನುಗುಣವಾಗಿ ಬಡ್ಡಿಯನ್ನು ಪಾವತಿಸಬೇಕು.

ii. ಮಹಿಳಾ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಸೇವಾ ಕ್ಷೇತ್ರದ ಸೂಕ್ಷ್ಮ ಹಾಗೂ ಸಣ್ಣ ಘಟಕಗಳಿಗೆ ಬಡ್ಡಿ ಸಹಾಯಧನ ಯೋಜನೆ (2021) ಯಡಿಯಲ್ಲಿ ಮಂಜೂರಾದ ಸಾಲಗಳಿಗೆ ನಿಗಧಿತ ಸಮಯದಲ್ಲಿ ಮರುಪಾವತಿಗೆ ಶೇ:0.50 ರಿಯಾಯಿತಿಯನ್ನು ವಿಸ್ತರಿಸಲಾಗುವುದು.

iii. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಪ್ರಸ್ತುತ ಬಡ್ಡಿದರವು ವಾರ್ಷಿಕ ಶೇ:12.00 ರಷ್ಟಿದ್ದು, ನಿಗಧಿತ ಸಮಯದಲ್ಲಿ ಮರುಪಾವತಿಗೆ ಶೇ:0.50 ರಿಯಾಯಿತಿಗಳನ್ನು ವಿಸ್ತರಿಸಿದಲ್ಲಿ, ಪ್ರಸ್ತುತ ಬಡ್ಡಿದರದಲ್ಲಿ ಶೇ:7.5 ಬಡ್ಡಿ ಸಹಾಯಧನವು (Interest Subvention/Subsidy) (Upfront) ಭಾಗವಾಗಿದ್ದು, ಮಹಿಳಾ ಉದ್ದಿಮೆದಾರರಿಗೆ ವಾರ್ಷಿಕ ಶೇ:4.0 ಬಡ್ಡಿದರ ಅನ್ವಯವಾಗುತ್ತದೆ.

iv. ಕೆ.ಎಸ್.ಎಫ್.ಸಿ.ಯು ಚಾಲ್ತಿ ಬಡ್ಡಿದರವನ್ನು ಹೆಚ್ಚಿಸಿದಾಗ /ಕಡಿಮೆಗೊಳಿಸಿದಾಗ ಬಡ್ಡಿ ಸಹಾಯಧನವು ಅನುಪಾತವಾಗಿ ಹೆಚ್ಚಾಗುತ್ತದೆ / ಕಡಿಮೆಯಾಗುತ್ತದೆ ಹಾಗೂ ಮಹಿಳಾ ಉದ್ದಿಮೆದಾರರಿಗೆ ಪರಿಣಾಮಕಾರಿ ಬಡ್ಡಿದರವು ವಾರ್ಷಿಕ ಶೇ:4.00 ರಷ್ಟಿರುತ್ತದೆ.

v. ಬಡ್ಡಿ ಸಹಾಯಧನವನ್ನು ಪಡೆಯಲು ಮಹಿಳಾ ಉದ್ದಿಮೆದಾರರು ಕೆ.ಎಸ್.ಎಫ್.ಸಿ ಸಂಸ್ಥೆಯಿಂದ ಪಡೆದ ಸಾಲಗಳನ್ನು ಚಾಚೂ ತಪ್ಪದೆ ಪ್ರತಿ ತಿಂಗಳು ನಿಗಧಿತ ಸಮಯಕ್ಕೆ ಮರುಪಾವತಿ ಮಾಡಬೇಕಾಗಿರುತ್ತದೆ.

vi. ಈ ಯೋಜನೆಯಡಿಯಲ್ಲಿ ಸಾಲ/ಸಾಲಗಳ ಗರಿಷ್ಠ ಮಿತಿಯು ಒಟ್ಟಾರೆ 200.00 ಲಕ್ಷ ರೂ.ಗಳು ತಲುಪುವವರೆಗೆ ಉದ್ದಿಮೆದಾರರಿಗೆ ಪರಿಣಾಮಕಾರಿ ಬಡ್ಡಿದರವು ವಾರ್ಷಿಕ ಶೇ:4.00 ಲಭ್ಯವಿರುತ್ತದೆ ಹಾಗೂ ಗರಿಷ್ಟ ಮಿತಿಯನ್ನು ಮೀರಿದಾಗ ಕೆ.ಎಸ್.ಎಫ್.ಸಿಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿದರವು ಅನ್ವಯವಾಗುತ್ತದೆ.

vii. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಗಳಿಂದ ಮಂಜೂರಾದ ಭೂಮಿಯಲ್ಲಿ ಮಾಡಿದ ಹೂಡಿಕೆಯು "ಮಹಿಳಾ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಸೇವಾ ಕ್ಷೇತ್ರದ ಸೂಕ್ಷ್ಮ ಹಾಗೂ ಸಣ್ಣ ಘಟಕಗಳಿಗೆ ಬಡ್ಡಿ ಸಹಾಯಧನ ಯೋಜನೆ (2021)" ಯಡಿಯಲ್ಲಿ ಸಾಲಸೌಲಭ್ಯಕ್ಕೆ ಅರ್ಹವಿರುವುದಿಲ್ಲ. ಆದಾಗ್ಯೂ, ಉದ್ದಿಮೆದಾರರು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಗಳಿಂದ ಮಂಜೂರಾದ ಭೂಮಿ ಹಾಗೂ ಸೇವಾ ವಲಯದ ಚಟುವಟಿಕೆಗಳಲ್ಲಿ ನೇರವಾಗಿ ಭಾಗಿಯಾಗದ ಅಗತ್ಯ ಕಟ್ಟಡ ನಿರ್ಮಾಣಕ್ಕೆ, ಕೆ.ಎಸ್.ಎಫ್.ಸಿಯಲ್ಲಿ ಚಾಲ್ತಿಯಲ್ಲಿರುವ ಸಾಮಾನ್ಯ ಯೋಜನೆಯಡಿಯಲ್ಲಿ

ಚಾಲ್ತಿಯಲ್ಲಿರುವ ಬಡ್ಡಿದರ ಅನ್ವಯವಾಗುವಂತೆ ಸಾಲ ನೆರವು ಪಡೆಯಲು ಅರ್ಹರಾಗಿರುತ್ತಾರೆ.

viii. ಉದ್ದಿಮೆದಾರರು ಪ್ರತ್ಯೇಕ ಸಾಲಗಳ ಮೊದಲ ಕಂತು ವಿತರಣೆಯ ದಿನಾಂಕದಿಂದ ಗರಿಷ್ಠ ಐದು ವರ್ಷಗಳವರೆಗೆ ಬಡ್ಡಿ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ. ಯೋಜನೆಯ ಕಾರ್ಯಸಾಧ್ಯತೆಯನ್ನು ಪರಿಗಣಿಸಿ ಮರುಪಾವತಿ ಅವಧಿಯು ಐದು ವರ್ಷಗಳನ್ನು ಮೀರಿದರೂ ಆಯಾ ಸಾಲ/ಸಾಲಗಳ ಮೊದಲ ವಿತರಣೆಯ ದಿನಾಂಕದಿಂದ ಗರಿಷ್ಠ ಐದು ವರ್ಷಗಳವರೆಗೆ ಬಡ್ಡಿ ಸಹಾಯಧನ ಲಭ್ಯವಿದ್ದು, ಗರಿಷ್ಠ ಅವಧಿ ಅಂದರೆ ಐದು ವರ್ಷಗಳ ನಂತರ ಮರುಪಾವತಿಸದ ಸಾಲ/ಸಾಲಗಳ ಬಾಕಿಗೆ ಕೆ.ಎಸ್.ಎಫ್.ಸಿ.ಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿದರವು ಅನ್ವಯವಾಗುತ್ತದೆ.

ix. ಯೋಜನೆಯಡಿ ಮೇಲೆ ತಿಳಿಸಲಾದ ಉದ್ಯಮಗಳಿಗೆ ಮಂಜೂರಾದ ಅವಧಿ ಸಾಲಗಳಿಗೆ ಮಾತ್ರ ಬಡ್ಡಿ ಸಹಾಯಧನ (Interest Subvention/Subsidy) ಲಭ್ಯವಿರುತ್ತದೆ. ದುಡಿಮೆ ಬಂಡವಾಳಕ್ಕೆ ನೀಡಿದ ಅವಧಿ ಸಾಲ, ಪ್ರತಿಷ್ಠಿತ ಉದ್ದಿಮೆದಾರರ ಸಾಲ, ಸಾಂಸ್ಥಿಕ ಸಾಲ ಇತ್ಯಾದಿಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

V ಮಹಿಳಾ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಸೇವಾ ಕ್ಷೇತ್ರದ ಸೂಕ್ಷ್ಮ ಹಾಗೂ ಸಣ್ಣ ಘಟಕಗಳಿಗೆ ಬಡ್ಡಿ ಸಹಾಯಧನ (Interest Subvention/Subsidy) ಯೋಜನೆ (2021)ಯಡಿಯಲ್ಲಿ ಸಾಲ ಪಡೆಯಲು ಅನರ್ಹ ಉದ್ಯಮಗಳು:

i. ಎನ್.ಬಿ.ಎಫ್.ಸಿ/ಎನ್.ಎಸ್.ಐ.ಸಿ/ಇತರೆ ಬ್ಯಾಂಕ್‌ಗಳು / ಖಾಸಗಿ ಹಣಕಾಸುದಾರರು, ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು / ಮರು ಹಣಕಾಸುಗಳು ಅಥವಾ ಕೆ.ಎಸ್.ಎಫ್.ಸಿ.ಯಿಂದ ಪಡೆದ ಹಿಂದಿನ ಸಾಲ/ಸಾಲಗಳ ಪರಿವರ್ತನೆಗಾಗಿ.

ii. ಈ ಕೆಳಗಿನ ಚಟುವಟಿಕೆಗಳಲ್ಲಿ ತೊಡಗಿರುವ ಉದ್ಯಮಗಳು:

(ಅ) ಎಲ್ಲಾ ಮೂಲಸೌಕರ್ಯ ಯೋಜನೆಗಳು, ವಸತಿ ಮತ್ತು ವಾಣಿಜ್ಯ ಕಟ್ಟಡಗಳು / ವಾಣಿಜ್ಯ ರಿಯಲ್ ಎಸ್ಟೇಟ್ (CRE) ಇತ್ಯಾದಿ.

(ಆ) ವ್ಯಾಪಾರ/ ವ್ಯಾಪಾರ ಚಟುವಟಿಕೆಗಳು.

(ಇ) ಮಾಲ್‌ಗಳು, ಸಿನಿಮಾ ಮಂದಿರಗಳು ಇತ್ಯಾದಿ.

(ಈ) ಸಾರಿಗೆ ವಾಹನಗಳು, ನಿರ್ಮಾಣ ಉಪಕರಣಗಳು ಇತ್ಯಾದಿ.

(ಉ) ಕೆ.ಎಸ್.ಎಫ್.ಸಿ.ಯ ಪ್ರಕಾರ ಅರ್ಹ ಸೇವಾ ವಲಯದ ಚಟುವಟಿಕೆಗಳನ್ನು ಹೊರತುಪಡಿಸಿ ಅಥವಾ ಇಲ್ಲಿ ನಿರ್ದಿಷ್ಟವಾಗಿ ಉಲ್ಲೇಖಿಸದ ಬೇರೆ ಯಾವುದೇ ಚಟುವಟಿಕೆಗಳು.

**VI. ಇತರೆ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳು:**

i. ಯಾವುದೇ ರೀತಿಯ ವಾಹನಗಳನ್ನು ಯೋಜನೆಯ ಭಾಗವಾಗಿ, ಪರಿಗಣಿಸಲಾಗುವುದಿಲ್ಲ ಹಾಗೂ ಹಣಕಾಸು ಸೌಲಭ್ಯ ನೀಡಲಾಗುವುದಿಲ್ಲ.

ii. ಕೆ.ಎಸ್.ಎಫ್.ಸಿ.ಯಲ್ಲಿ ಸಾಲದ ಅನುಮೋದನೆಯ ನಿಯಮಗಳು ಮತ್ತು ಷರತ್ತುಗಳಾದ ಪ್ರವರ್ತಕರ ಪಾಲಿನ ಬಂಡವಾಳ, ಸಾಲ ಈಕ್ವಿಟಿ ಅನುಪಾತ, ಪೂರಕ ಭದ್ರತಾ ಅವಶ್ಯಕತೆ, ಯೋಜನೆಯ ಕಾರ್ಯಸಾಧ್ಯತೆ ಇತ್ಯಾದಿಗಳು ಚಾಲ್ತಿಯಲ್ಲಿರುವ ಸಾಲದ ನೀತಿಯ ಪ್ರಕಾರ ಖಚಿತಪಡಿಸಿಕೊಳ್ಳಲಾಗುತ್ತದೆ.

**VII. ಬಡ್ಡಿ ಸಹಾಯಧನ ಬಿಡುಗಡೆ:**

ಬಡ್ಡಿ ಸಹಾಯಧನ (Interest Subvention/Subsidy)ವನ್ನು ಕೆ.ಎಸ್.ಎಫ್.ಸಿ.ಗೆ ಮುಂಚಿತವಾಗಿ ಬಿಡುಗಡೆ ಮಾಡಲಾಗುತ್ತದೆ.

i. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಖರ್ಚು ಹೆಡ್‌ನಡಿಯಲ್ಲಿ ಬಡ್ಡಿ ಸಹಾಯಧನವು ಪ್ರತ್ಯೇಕ Head of account ಹೊಂದಿರುತ್ತದೆ.

ii. ಕೆ.ಎಸ್.ಎಫ್.ಸಿ. ಪ್ರತಿ ತಿಂಗಳು ಬಡ್ಡಿ ಸಹಾಯಧನದ ಅಂಗವನ್ನು ಮಹಿಳಾ ಉದ್ಯಮಿಗಳ ಖಾತೆಗೆ ರವಾನಿಸತಕ್ಕದ್ದು.

iii. ಕೆ.ಎಸ್.ಎಫ್.ಸಿ. ಚಾಲ್ತಿ ದರದ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಬಡ್ಡಿ ಸಹಾಯಧನ (Interest Subvention/Subsidy) ಭಾಗವನ್ನು ***Demand Notice*** ನಲ್ಲಿ ಸೂಚಿಸತಕ್ಕದ್ದು. ನಿಗಧಿತ ದಿನಾಂಕದಂದು ಉದ್ದಿಮೆದಾರರು ನಿವ್ವಳ ಬಡ್ಡಿ (ಸಹಾಯಧನ ಬಿಟ್ಟು) ಮೊತ್ತವನ್ನು ಪಾವತಿಸಬೇಕು.

iv. ಬಡ್ಡಿ ಸಹಾಯಧನ ಬಿಡುಗಡೆ ಆದೇಶದ ಪ್ರಕಾರ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ (KSWDC) ಇವರು ತಯಾರಿಸುವ ಈ Payee's Reciept/ಬಿಲ್ಲಿಗೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಮೇಲು ರುಜು ಪಡೆದು ಬಡ್ಡಿ ಸಹಾಯಧನ ಅನುದಾನವನ್ನು K-2 ಮೂಲಕ ಪಡೆದು (draw) ನಂತರ ಕೆ.ಎಸ್.ಎಫ್.ಸಿ.(KSFC) ಯವರಿಗೆ ಬಿಡುಗಡೆ ಮಾಡುವುದು. ಕೆ.ಎಸ್.ಎಫ್.ಸಿ. (KSFC) ಯವರು ಈ ಬಡ್ಡಿ ಸಹಾಯಧನವನ್ನು ಅರ್ಹ ಮಹಿಳಾ ಫಲಾನುಭವಿಗಳ / ಉದ್ದಿಮೆದಾರರ ಖಾತೆಗೆ ಜಮಾ / ಹೊಂದಾಣಿಕೆ ಮಾಡತಕ್ಕದ್ದು.

v. ಕೆ.ಎಸ್.ಎಫ್.ಸಿ. ಇವರು ಮಹಿಳಾ ಫಲಾನುಭವಿಗಳಿಗೆ ಬಡ್ಡಿ ಸಹಾಯಧನ ಬಿಡುಗಡೆಯ ತ್ರೈಮಾಸಿಕ ಪಟ್ಟಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರಿಗೆ ಸಲ್ಲಿಸತಕ್ಕದ್ದು.

ಕಲ್ಪನಾ (signature) 13/01/2022

**VIII. ಸ್ಪಷ್ಟೀಕರಣಗಳು:**

ಯೋಜನೆಯ ಬಗ್ಗೆ ಯಾವುದೇ ಸ್ಪಷ್ಟೀಕರಣವನ್ನು ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ ಪಡೆಯಬಹುದು.

******

ಕಲ್ಪನಾ ಆರ್
13/07/2022

ಆರ್. ಕಲ್ಪನ
ಸರ್ಕಾರದ ಅಪರ ಕಾರ್ಯದರ್ಶಿ
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ